ಪ್ರಜಾವಾಣಿ

## ಅಖಿಲ ಭಾರತ ಅಂತರ ವಿವಿ ಕ್ರಿಕೆಟ್ ಟೂರ್ನಿ

# ಜೈನ್ ವಿವಿಗೆ ಜಿವಾಜಿ ಎದುರಾಳಿ

**ಪ್ರಜಾವಾಣಿ ವಾರ್ತೆ**

ಮಣಿಪಾಲ: ಪಶ್ಚಿಮ ವಲಯದ ರನ್ನರ್ ಅಪ್ ಜಿವಾಜಿ ವಿಶ್ವವಿದ್ಯಾಲಯ 15 ರನ್‌ಗಳ ಅಂತರದಿಂದ ಪೂರ್ವ ವಲಯದ ಚಾಂಪಿಯನ್ ಜಾನ್‌ಪುರದ ವೀರ್‌ಬಹದ್ದೂರ್ ಸಿಂಗ್ (ವಿಬಿಎಸ್) ಪೂರ್ವಾಂಚಲ ವಿವಿ ತಂಡವನ್ನು 15 ರನ್‌ಗಳಿಂದ ಸೋಲಿಸಿ ರೋಹಿಂಟನ್ ಬಾರಿಯ ಟ್ರೋಫಿ ಅಖಿಲ ಭಾರತ ಅಂತರ ವಲಯ ವಿವಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದೆ.

ಅವರು ಸೆಮಿಫೈನಲ್‌ನಲ್ಲಿ ಬೆಂಗಳೂರಿನ ಜೈನ್ ವಿವಿ ತಂಡವನ್ನು ಎದುರಿಸಲಿದ್ದಾರೆ.

ಇಲ್ಲಿನ ಮಣಿಪಾಲ ತಾಂತ್ರಿಕ ಸಂಸ್ಥೆ (ಎಂಐಟಿ) ಮೈದಾನದಲ್ಲಿ ಬುಧವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಜಿವಾಜಿ ವಿವಿ ತಂಡವು 49 ಓವರ್‌ಗಳಲ್ಲಿ 198 ರನ್ ಗಳಿಸಿತು. ವಿಬಿಎಸ್ ಪೂರ್ವಾಂಚಲ ತಂಡವು 47.4 ಓವರ್‌ಗಳಲ್ಲಿ ಆಲೌಟ್ ಆಯಿತು.

ಸೆಮಿಫೈನಲ್: ಮಣಿಪಾಲ ವಿವಿ ಮೈದಾನದಲ್ಲಿ ನಡೆದ ಸೆಮಿಫೈನಲ್ ಪಂದ್ಯದಲ್ಲಿ (ಎರಡು ದಿನ) ಮುಂಬೈ ವಿವಿ ತಂಡವು ಮೊದಲ ದಿನ ದೆಹಲಿಯ ಜಾಮಿಯಾ ಮಿಲಿಯಾ ವಿವಿ ತಂಡದ ಎದುರು 52 ಓವರ್‌ಗಳಲ್ಲಿ 9 ವಿಕೆಟ್‌ಗೆ 173 ರನ್ ಗಳಿಸಿದೆ. ಪಿಚ್ ತೇವಾಂಶದಿಂದ ಕೂಡಿದ್ದರಿಂದ ಓವರ್‌ಗಳ ಸಂಖ್ಯೆಯನ್ನು 90ರ ಬದಲು 70ಕ್ಕೆ ಸೀಮಿತಗೊಳಿಸಲಾಯಿತು. ದೆಹಲಿಯ ಬೌಲರ್ ಅಭಯ್ ನೇಗಿ (52ಕ್ಕೆ ಐದು) ಹಾಗೂ ಆಶಿಶ್ ಚೋಪ್ರಾ (46ಕ್ಕೆ ಮೂರು) ಮುಂಬೈ ತಂಡಕ್ಕೆ ಮಾರಕವಾಗಿ ಪರಿಣಮಿಸಿದರು. ಆದರೂ ಧೃತಿಗೆಡದೆ ಆಡಿದ ಶಶಾಂಕ್ ಸಿಂಗ್ 102 ಎಸೆತಗಳಲ್ಲಿ 69 ರನ್ (ಮೂರು ಸಿಕ್ಸರ್, ಏಳು ಬೌಂಡರಿ) ಸಿಡಿಸಿದರು.

ಮಂಗಳವಾರ ಎಂಐಟಿ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಜೈನ್ ವಿವಿ ತಂಡವು ಅಲಿಘಡ ಮುಸ್ಲಿಂ ವಿವಿ ತಂಡವನ್ನು ಮೂರು ವಿಕೆಟ್‌ಗಳಿಂದ ಸೋಲಿಸಿ ಸೆಮಿಫೈನಲ್ ಪ್ರವೇಶಿಸಿತ್ತು.

ಸ್ಕೋರುಗಳು: ಎಂಐಟಿ ಮೈದಾನ: ಜಿವಾಜಿ ವಿವಿ 49 ಓವರ್‌ಗಳಲ್ಲಿ ಆಲೌಟ್ (ಭರತ್ ಅನಂತ್ 51, ರವಿ ಸಿಕಾರ್ವಾರ್ 47. ಗುಲಾಬ್ ನಿಶಾದ್ 22ಕ್ಕೆ2, ಪ್ರವೀಣ್ ದುಬೆ 35ಕ್ಕೆ2). ವಿಬಿಎಸ್ ಪೂರ್ವಾಂಚಲ ಜಾನ್‌ಪುರ್ 47.4 ಓವರ್‌ಗಳಲ್ಲಿ ಆಲೌಟ್ (ಪ್ರವೀಣ್ ದುಬೆ 57. ಸೊಹ್ರಾಬ್ 41ಕ್ಕೆ3, ಪವನ್ 28ಕ್ಕೆ2)

ಮಣಿಪಾಲ ವಿವಿ ಮೈದಾನ: ಮುಂಬೈ ವಿವಿ 52 ಓವರ್‌ಗಳಲ್ಲಿ 9ವಿಕೆಟ್‌ಗೆ173 ( ಶಶಾಂಕ್ 69. ಅಭಯ್ ನೇಗಿ 52ಕ್ಕೆ5, ಆಶಿಶ್ ಚೋಪ್ರಾ 46ಕ್ಕೆ3).